ಎತ್ಕಂಡು ನಡೆದೇಬಿಟ್ಟ. ನೋಡ್ತಾನೇ ಇದ್ದೆ, ಬೇಡ ಅಂತ ಹೇಳಕ್ಕಾಗ್ಲಿಲ್ಲ. ಇಬ್ಬರೂ ಬಸ್ಸು ಹತ್ಕೊಂಡು ಮನೀಗೆ ಹೋದ್ವಿ. ಅವತ್ತೇ ಮಗೀಗೆ ಹೊಸಾ ಬಟ್ಟೆ ತಂದು ಹಾಕ್ದೆ, ಪಕ್ಕನೇ ಮಲಗಿಸ್ಕಂಡಿದ್ದೆ. ಇಸುಬು ರಾತ್ರಿ ಪೂರಾ ಆಟ ಆಡಿಸ್ಕಂಡೇ ಇದ್ದ. ನನ್ ಗಂಡ ಇದ್ದೋನು, ಯಾರ್ ಕೂಸು ಎತ್ಕಂಡು ಬಂದಿದ್ದೀಯಾ, ಬುದ್ಧೀ ಗಿದ್ದಿ ಐತಾ? ಪೊಲೀಸ್ನೋರು ಹುಡಿಕ್ಕಂಡು ಬಂದು ಒದೀತಾರೆ ತಡೀ ಅಂದಿದ್ದ. ಏನ್ ಮಾಡಾದು, ಆಸೆ! ಎಲ್ಡ್ ದಿನಾ ನನ್ ಪ್ರಾಣದಂಗೆ ನೋಡ್ಕಂಡಿದ್ದೆ ಸಾ... ಏನಾಗ್ಯೆತೋ ನೋಡಾನ ಅಂತ ಅವತ್ತು ಆಫೀಸ್ ಮನೀಗೆ ಬಂದಿದ್ನಾ? ಎಲ್ರ ಕೈನಾಗೂ ಪೇಪ್ರು, ಅದೇ ಸುದ್ದಿ. ಬಲಿ ಕೊಡಕ್ಕೆ ಕಿಡ್ನಾಪು ಮಾಡವ್ರಂತೆ, ಕೈಯಿ ಕಾಲು ತಿರುಚಿ ಭಿಕ್ಷೆಗೆ ಹಾಕ್ತಾರಂತೆ ಅಂತ ಏನೇನೋ ಮಾತಾಡ್ಕತಾ ಇದ್ರು. ಕೇಳಿ ತರತರ ನಡುಗ್ಬುಟ್ಟೆ ಸಾ... ಮಗೀನ ಮನೇಲಿಟ್ಕಂಡ್ರೆ ಗಂಡ ಹೇಳ್ದಂಗೇ ಆಯ್ತುದೆ. ಪೊಲೀಸ್ನೋರು ಎಳ್ಕಂಡು ಹೋಗಿ ಜೈಲಿಗೆ ಬುಟ್ ಬತ್ತಾರೆ ಅನ್ನುಸ್ತು. ಮಾರ್ನೆ ದಿನಾ ಮಗಾನ ಸೀದಾ ತಂದು ಹೊಸೂರು ರಸ್ತೆಲಿರೋ ದರ್ಗಾಕ್ಕೆ ಬುಟ್ಬುಟ್ಟೆ. ಮಗೀನ ಒಸಿ ನೋಡ್ಕಳೀ ಅಂತ ಮೌಲಿಗೆ ಹೇಳಿ ನೋಡ್ಕಬರಾನ ಅಂತ ಮತ್ತೆ ಅದೇ ಏರಿಯಾಗೆ ಹೋದೆ... ಪೊಲೀಸು ಜೀಪು ಎಲ್ಲಾ ಕಡೆ ಓಡಾಡ್ತಿತ್ತು. ಜೀವ ಬಾಯಿಗೇ ಬಂತು. ತಲೇನೇ ಓಡ್ತಾ ಇರ್ಲಿಲ್ಲ. ಹಂಗೇ ಮೇನ್ ರೋಡಿಗೆ ಬಂದೆ. ಖಾಲಿ ಬಸ್ಗೆ ಕೈ ತೋರ್ಸಿ ಹತ್ಕೊಂಡೆ. ಡ್ರೈವರಣ್ಣನ ಜೊತೆ ಮಾತಾಡ್ತಾ ಒಂದು ಮಗಾ ಸಿಕ್ಕೈತೆ, ಹೊಸೂರು ರಸ್ತೆ ದರ್ಗಾದಾಗೈತೆ, ಅವರಪ್ಪನಿಗೆ ವಿಷಯಾ ಹೇಳ್ಬುಡಣ್ಣ ಅಂದೆ. ಆಯ್ತು ಅಂದ. ಆದ್ರೂ ಮನ್ಸು ತಡೀದೆ ಮತ್ತೆ ಆಮ್ಯಾಗೆ ಫೋನು ಮಾಡಿ ಕೇಳ್ದೆ...'

'ಅದೊಂದೇ ನೋಡು ನೀನು ಮಾಡಿದ್ ಒಳ್ಳೇ ಕೆಲ್ಸಾ... ಇಲ್ಲ ಅಂದ್ರೆ ನಿನ್ನ ಮನೆ ಮುಟ್ಟಿ ಬರೋ ಸೌಭಾಗ್ಯ ನಮಗೆ ಸಿಗ್ತಾ ಇರ್ಲಿಲ್ಲ ಕಣವ್ವಾ ಮಹಾತಾಯೀ...' ನಿಟ್ಟುಸಿರಿಡುತ್ತಾ ಹೇಳಿದೆ. ಪ್ರಶ್ನಾರ್ಥಕವಾಗಿ ನನ್ನನ್ನೇ ನೋಡಿದಳು.

ಅಷ್ಟರಲ್ಲಾಗಲೇ ಘಟನೆಯ ವಾಸನೆ ಹಿಡಿದು ಕ್ಯಾಮೆರಾ ಬಗಲಿಗೇರಿಸಿ ಹಸೀನಾಳ ಮನೆ, ಅವಳಿದ್ದ ಏರಿಯಾವನ್ನೆಲ್ಲಾ ತಡಕತೊಡಗಿದ್ದ ಟೀವಿ ಮೀಡಿಯಾದವರು 'ಹೆಣ್ಣು ಮಗುವಿಗೆ ಹಂಬಲಿಸಿದ ತಾಯಿ ಕರುಳು' ಎಂಬ ಹೆಡ್ಡಿಂಗು ಹಾಕಿ ಬ್ರೇಕಿಂಗ್ ನ್ಯೂಸುಗಳನ್ನು ತೇಲಿಬಿಡುತ್ತಿದ್ದರು.

## ತುರುವೇಕೆರೆ ರವಿಶಂಕರ್

ತಮ್ಮ ಪೊಲೀಸ್ ವೃತ್ತಿಯ ಅನುಭವಗಳ ಹಿನ್ನೆಲೆಯಲ್ಲಿ ಪ್ರಬಂಧಗಳನ್ನು ಬರೆಯುವ ರವಿಶಂಕರ್ ತುಮಕೂರು ಜಿಲ್ಲೆಯ ತುರುವೇಕೆರೆಯವರು. ಕೆಮಿಕಲ್ ಎಂಜಿನಿಯರಿಂಗ್ ಪದವೀಧರರಾಗಿರುವ ಅವರು ಪ್ರಸ್ತುತ ಬೆಂಗಳೂರು ನಗರ ಗುಪ್ತವಾರ್ತೆ ವಿಭಾಗದಲ್ಲಿ ಪೊಲೀಸ್ ಇನ್‌ಸ್ಪೆಕ್ಟರ್ ಆಗಿದ್ದಾರೆ. 'ಮಯೂರ', 'ಪ್ರಜಾವಾಣಿ', 'ಸುಧಾ'ಗಳಲ್ಲಿ ಅವರ ಪ್ರಬಂಧಗಳು ಪ್ರಕಟವಾಗಿವೆ. ಪ್ರಬಂಧ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿರುವ ಈ ಲೇಖಕ, ಪೊಲೀಸ್ ಅಧಿಕಾರಿಯಾಗಿ ಗುಲ್ಬರ್ಗಾ, ಮಂಗಳೂರುಗಳಲ್ಲಿ ಹಾಗೂ ಎಸ್‌ಟಿಎಫ್‌ನ ವೀರಪ್ಪನ್ ವಿಶೇಷ ಕಾರ್ಯಾಚರಣೆ ಪಡೆಯಲ್ಲಿ (2005) ಕಾರ್ಯನಿರ್ವಹಿಸಿದ್ದಾರೆ.